# ಬದಲಾವಣೆ ಅಗತ್ಯ

**ಬೆಂಗಳೂರು:** ಉದ್ಯಮಗಳು ಉಳಿಯಲು ಮತ್ತು ಸಮಾಜದಲ್ಲಿ ಪ್ರಸ್ತುತತೆಯನ್ನು ಕಾಪಾಡಿಕೊಳ್ಳಲು ಬದಲಾವಣೆ, ಅದರಲ್ಲೂ ಮುಖ್ಯವಾಗಿ ತಾಂತ್ರಿಕತೆಯ ಬದಲಾವಣೆ ಅಗತ್ಯ. ಹಾಗೆ ಬದಲಾಗುವಾಗ ಉತ್ಪನ್ನಗಳ ಗುಣಮಟ್ಟ ಸುಧಾರಣೆಯೂ ಅನಿವಾರ್ಯ ಎನ್ನುವ ಅಭಿಪ್ರಾಯ ಸಿಎಮ್‌ಆರ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಆಯೋಜಿಸಿದ್ದ ಸಿಐಕ್ಸ್‌ಓ ಸಮಾವೇಶದಲ್ಲಿ ವ್ಯಕ್ತವಾಗಿದೆ. ಪ್ರಸ್ತುತ ಅಸ್ತವ್ಯಸ್ತ ಜಗತ್ತಿನಲ್ಲಿ ಸ್ಥಿತಿಸ್ಥಾಪಕ ಸಂಸ್ಥೆಗಳನ್ನು ನಿರ್ಮಿಸುವ ಕುರಿತು ಸಮಾವೇಶದಲ್ಲಿ ಚರ್ಚೆ ನಡೆಯಿತು. ಉದ್ಯಮಗಳ ಉಳಿವು ಮತ್ತು ಬೆಳವಣಿಗೆಗಳ ಕುರಿತು ಪ್ರಮುಖ ಉದ್ಯಮಿಗಳು ಮತ್ತು ಸಮಾಲೋಚಕರು ಒತ್ತಿ ಹೇಳಿದರು. ಸ್ಥಿತಿಸ್ಥಾಪಕತ್ವವು ಕೇವಲ ಅಸ್ತಿತ್ವ ಉಳಿಸಿಕೊಳ್ಳಲು ಮಾತ್ರವಲ್ಲದೆ ಸಂಸ್ಥೆ ಬೆಳೆಯುವುದಕ್ಕಾಗಿ ಕೂಡ ಅಗತ್ಯ. ಅಲ್ಲದೆ, ಸಮಾಜದ ಬದಲಾವಣೆ ಮತ್ತು ಹಠಾತ್ ಎದುರಾಗುವ ಅಡ್ಡಿ ಆತಂಕಗಳನ್ನು ನಿರೀಕ್ಷಿಸಿ, ಅದಕ್ಕೆ ಸಿದ್ಧತೆ ಮಾಡಿಕೊಳ್ಳುವ, ಸೂಕ್ತವಾಗಿ ಪ್ರತಿಕ್ರಿಯಿಸುವ ಮತ್ತು ಅಗತ್ಯದಂತೆ ಹೊಂದಿಕೊಳ್ಳುವ ಸಾಮರ್ಥ್ಯ ಕೂಡ ಬೇಕು ಎಂದು ಹೇಳಿದರು.